**ಸಾಕ್ಷಿಯನ್ನು ದಿನಾಂಕ 14.07.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

21. ನಾನು ಮಾಡೂರು ಯುಸೂಫನ ಕೊಲೆಗೆ ಸಂಬಂಧಿಸಿದಂತೆ ಅದೇ ದಿನ 11.50 ಗಂಟೆಗೆ ಜಿಲ್ಲಾ ಕಾರಾಗೃಹದಲ್ಲಿ ಗಣಕೀಕೃತ ದೂರನ್ನು ನೀಡಿರುತ್ತೇನೆ. ನಾನು ನೀಡಿರುವ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರಿನ ದೃಢೀಕೃತ ಪ್ರತಿಯನ್ನು ನಿಪಿ-**6** ಎಂದು ಗುರುತಿಸಲಾಯಿತು. ನಾನು, ಹಿಂದಿನಮನಿ ಮತ್ತು ಸ್ಥಳಕ್ಕೆ ಬಂದಿದ್ದ ಪೊಲೀಸರು ಜೈಲಿನ ಹೊರ ಆವರಣದಿಂದ ವಿಶೇಷ ಬದ್ರತಾ ವಿಭಾಗಕ್ಕೆ ಹೋಗುವ ವೇಳೆಗೆ ನಮ್ಮನ್ನು ಒಳಗೆ ಬಾರದಂತೆ ಈ ಪ್ರಕರಣದ ಆರೋಪಿಗಳು ತಡೆಯುವ ಉದ್ದೇಶದಿಂದ ನಮ್ಮ ಮೇಲೆ ಕಲ್ಲು, ಹಂಚು ಮತ್ತು ರೀಪಿನ ತುಂಡುಗಳನ್ನು ಎಸೆದಿರುತ್ತಾರೆ. ನಮ್ಮಗಳ ಮೇಲೆ ಕಲ್ಲು, ಹಂಚು ಮತ್ತು ರೀಪಿನ ತುಂಡುಗಳನ್ನು ಎಸೆದ ಕಾರಣದಿಂದ ನಾವು ವಿಶೇಷ ಭದ್ರತಾ ವಿಭಾಗದ ಒಳಗೆ ಹೋಗಲು ಅಡ್ಡಿಯಾಗಿತ್ತು, ನಮ್ಮ ಸರ್ಕಾರಿ ಕರ್ತವ್ಯಕ್ಕೆ ತೊಂದರೆ ಆಗಿರುತ್ತದೆ.

22. ಹೆಚ್ಚಿನ ಪೊಲೀಸ್ ಸಿಬ್ಬಂದಿಗಳು ಸ್ಥಳಕ್ಕೆ ಬಂದ ನಂತರ ನಾವು ವಿಶೇಷ ಭದ್ರತಾ ವಿಭಾಗದ ಒಳಗೆ ಹೋಗಿರುತ್ತೇವೆ. ಹೊರಗೆ ನಿಂತಿದ್ದ ಖೈದಿಗಳನ್ನು ಅವರವರ ಸೆಲ್ ಮತ್ತು ಬ್ಯಾರಾಕುಗಳಿಗೆ ಕಳುಹಿಸುವ ಪ್ರಯತ್ನ ಮಾಡಿದ್ದೇವೆ. ಈ ಪ್ರಕರಣದ ಆರೋಪಿಗಳಾದ ಹಬೀಬ್ ಮತ್ತು ನಫಟೆ ರಫೀಕ್ ದೊಣ್ಣೆಗಳನ್ನು ಹಿಡಿದು ಹಾಗೂ ಸಣ್ಣ ಇಕ್ಬಾಲ್ ಮತ್ತು ಅಜರುದ್ದೀನ್ ರೀಪುಗಳನ್ನು ಹಿಡಿದು, ಇರ್ಷಾದ್ ಸಣ್ಣ ಚೂರಿ ತರಹದ ಆಯುಧ ಹಿಡಿದು, ಮಹಮ್ಮದ್ ಇಕ್ಬಾಲ್ ತಲವಾರು ರೀತಿಯ ಆಯುಧಗಳನ್ನು ಹಿಡಿದು, ಈ ಪ್ರಕರಣದ ಬೇರೆ ಆರೋಪಿಗಳು ಸಣ್ಣ ರೀಪುಗಳನ್ನು ಹಿಡಿದು 4 ನೇ ನಂಬರ್ ಸೆಲ್ ನಿಂದ ಹೊರಗೆ ಬಂದರು.

23. 6 ನೇ ಆರೋಪಿ ಸಣ್ಣ ಇಕ್ಬಾಲ್ ಮತ್ತು 7 ನೇ ಆರೋಪಿ ಅಜರುದ್ದೀನ್ ತಮ್ಮ ಕೈಗಳಿದ್ದ ರೀಪುಗಳನ್ನು ಮೆಟ್ಟಿಲು ಬಳಿ ಎಸೆದು 1 ಮತ್ತು 2 ನೇ ಬ್ಯಾರಾಕುಗಳ ಕಡೆಗೆ ಓಡಿ ಹೋಗಿರುತ್ತಾರೆ. 1 ನೇ ಆರೋಪಿ ಮಹಮ್ಮದ್ ಇಕ್ಬಾಲ್, 8 ನೇ ಆರೋಪಿ ಹಬೀಬ್ ಮತ್ತು 4 ನೇ ಆರೋಪಿ ನಫಟೆ ರಫೀಕ್ ತಮ್ಮ ಕೈಗಳಿದ್ದ ಆಯುಧಗಳನ್ನು 4 ನೇ ಸೆಲ್ ನ ಒಳಗೆ ಎಸೆದು ಓಡಿ ಹೋಗಿರುತ್ತಾರೆ. 3 ನೇ ಆರೋಪಿ ಇರ್ಷಾದ್ ಅವನ ಕೈಯಲ್ಲಿದ್ದ ಆಯುಧವನ್ನು ಎಲ್ಲಿ ಎಸೆದ ಎಂದು ಗೊತ್ತಾಗಲಿಲ್ಲ. ಸೆಲ್ ಮತ್ತು ಬ್ಯಾರಾಕುಗಳ ಹಂಚುಗಳನ್ನು ಒಡೆದು ಹೊರ ಬಂದಿದ್ದರಿಂದ ಸರ್ಕಾರಿ ಆಸ್ತಿ ನಷ್ಟವಾಗಿರುತ್ತದೆ.

24. ನಾನು ದೂರು ನೀಡಿದ ನಂತರ ಪೊಲೀಸರು ಸುಮಾರು 01.00 ಗಂಟೆಯ ವೇಳೆಗೆ ಪಂಚನಾಮೆ ಕ್ರಮವನ್ನು ಕೃತ್ಯ ನಡೆದ ಸ್ಥಳದಲ್ಲಿ ಜರುಗಿಸಿರುತ್ತಾರೆ. ಪೊಲೀಸರು ಭರತ್ ಕುಮಾರ್ ಮತ್ತು ಅಸ್ಪಕ್ ಹುಸೇನ್ ಎಂಬ ಪಂಚರುಗಳನ್ನು ಕರೆದುಕೊಂಡು ಬಂದಿದ್ದರು. ಪೊಲೀಸರು ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿ ಕೊಲೆಗೆ ಸಂಬಂಧಿಸಿದ ಎಲ್ಲ ವಸ್ತುಗಳನ್ನು ಅಮಾನತುಪಡಿಸಿಕೊಂಡು ಪಂಚನಾಮಾ ಕ್ರಮ ಜರುಗಿಸಿರುತ್ತಾರೆ. ಪೊಲೀಸರು ತಾವು ಅಮಾನತುಪಡಿಸಿಕೊಂಡ ವಸ್ತುಗಳಿಗೆ ವಿಶೇಷ ಗುರುತಾಗಿ A1 ರಿಂದ A26 ಎಂದು ನಮೂದಿಸಿರುತ್ತಾರೆ. ಮಾಡೂರು ಯುಸೂಫನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ A1 ರಿಂದ A10, A25 ಮತ್ತು A26 ಸ್ವತ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ.

25. ಪೊಲೀಸರು ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿ ಕೊಲೆಯಾದ ಸ್ಥಳಗಳಲ್ಲಿ ಪಂಚನಾಮೆ ಮಾಡಿರುತ್ತಾರೆ. ಸೆಲ್ ನಂಬರ್ 4 ರಲ್ಲಿ ಗಣೇಶ್ ಶೆಟ್ಟಿ ಇದ್ದು, ಪೊಲೀಸರು ಸೆಲ್ ನ ಹೊರಬಾಗದ ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು ಸಂಗ್ರಹಿಸಿಕೊಂಡಿರುತ್ತಾರೆ. 4 ನೇ

ಸೆಲ್‌ನ ಹೊರಗಿದ್ದ ಸಿಮೆಂಟ್ ಬೆಡ್ ನ ಮೇಲಿನ ರಕ್ತದ ಕಲೆಗಳನ್ನು ಸಂಗ್ರಹಿಸಿಕೊಂಡಿರುತ್ತಾರೆ. 4 ನೇ ಸೆಲ್‌ನ ಒಳಗಿನ ದಕ್ಷಿಣ ಬಾಗದ ಗೋಡೆಯ ಮೇಲಿನ ರಕ್ತದ ಕಲೆಗಳನ್ನು ಸಂಗ್ರಹಿಸಿಕೊಂಡಿರುತ್ತಾರೆ. 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ನ ಕೈಯಲ್ಲಿದ್ದ ತಲವಾರ್ 4 ನೇ ಸೆಲ್‌ನ ಪೂರ್ವ ಉತ್ತರ ಮೂಲೆಯಲ್ಲಿದ್ದು, ಅದನ್ನು ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಆಯುಧ ಸುಮಾರು 20 ಇಂಚು ಉದ್ದವಿರುವ ಆಯುಧವಾಗಿತ್ತು.

26. 4 ನೇ ಸೆಲ್‌ನ ದಕ್ಷಿಣ ಮೂಲೆಯಲ್ಲಿ 2 ದೊಣ್ಣೆಗಳಿದ್ದು, ಒಂದು ದೊಣ್ಣೆ ಮೂರುವರೆ ಅಡಿ ಉದ್ದ 6 ಇಂಚು ಸುತ್ತಳತೆಯದಾಗಿತ್ತು. ಮತ್ತೊಂದು ದೊಣ್ಣೆ ಮೂರುವರೆ ಅಡಿ ಉದ್ದ, ಐದುವರೆ ಇಂಚು ಸುತ್ತಳತೆಯದಾಗಿತ್ತು. 4 ನೇ ಸೆಲ್‌ನ ಹೊರಗೆ ಮೆಟ್ಟಿಲಿನ ಬಳಿ ಎರಡು ರೀಪುಗಳು ಇದ್ದು, ಅವುಗಳಲ್ಲಿ ಒಂದು ರೀಪು 3 ಅಡಿ ಉದ್ದ ಮತ್ತು ಮತ್ತೊಂದು 2 ಅಡಿ ಉದ್ದದ ರೀಪುಗಳಾಗಿದ್ದವು. ಮೆಟ್ಟಿಲ ಮೇಲಿನ ರಕ್ತದ ಕಲೆಯನ್ನು ಸಹ ಸಂಗ್ರಹಿಸಿಕೊಂಡಿರುತ್ತಾರೆ. ಸದರಿ ರೂಮಿನ ಹಿಂಬಾಗಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ರಕ್ತದ ಕಲೆಯಾಗಿದ್ದ ಬಟ್ಟೆಗಳಿದ್ದು, ಅವುಗಳನ್ನು ಸಹ ಪೊಲೀಸರು ಸಂಗ್ರಹಿಸಿಕೊಂಡರು.

27. ಘಟನಾ ಕಾಲದಲ್ಲಿ ಮುನೀರ ಧರಿಸಿದ್ದ ಕಪ್ಪು ಬೂದು ಬಣ್ಣದ ಚಡ್ಡಿ, 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ಘಟನಾ ಕಾಲದಲ್ಲಿ ಧರಿಸಿದ್ದ ಬಿಳಿ ಮತ್ತು ಹಳದಿ ಬಣ್ಣದ ಪಟ್ಟಿಗಳುಳ್ಳ ಟೀ ಶರ್ಟ್, 3 ನೇ ಆರೋಪಿ ಇರ್ಷದ್ ಘಟನಾ ಕಾಲದಲ್ಲಿ ಧರಿಸಿದ್ದ ನೀಲಿ ಬಣ್ಣದ ಟೀಶರ್ಟ್, 4 ನೇ ಆರೋಪಿ ನಫಟೆ ರಫೀಕ್ ಧರಿಸಿದ್ದ ಕೆಂಪು ಬಣ್ಣದ ಬರ್ಮುಡ, 11 ನೇ ಆರೋಪಿ ನಿಜಾಮುದ್ದಿನ್ ಧರಿಸಿದ್ದ ಬೂದು ಬಣ್ಣದ ಟೀಶರ್ಟ್ ಇವುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ

ಸೀಲ್ ಮಾಡಿ ಅವುಗಳನ್ನು ಪೊಲೀಸರು ಅಮಾನತುಪಡಿಸಿಕೊಂಡು ತೆಗೆದುಕೊಂಡು ಹೋಗಿರುತ್ತಾರೆ.

28. ಪೊಲೀಸರು ನನ್ನ ಸಮಕ್ಷಮ ಜರುಗಿಸಿದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯ ಬಗ್ಗೆ ಸಾಕ್ಷಿಯ ಯಾವುದೇ ಹೇಳಿಕೆ ಇಲ್ಲದಿರುವುದರಿಂದ ಸದರಿ ದಾಖಲೆಯನ್ನು ಗುರುತಿಸಲು ಆರೋಪಿಗಳ ಪರ ವಕೀಲರು ಆಕ್ಷೇಪಣೆ ಮಾಡಿದ್ದು, ಮಾನ್ಯ ಅಭಿಯೋಜಕರು ಸಾಕ್ಷ್ಯವನ್ನು ಪೊಲೀಸರು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರಡಿಯಲ್ಲಿ ಮಾಡಿಕೊಂಡ ಹೇಳಿಕೆಗೆ ಸಿಮೀತಗೊಳಿಸುವಂತೆ ಇರುವುದಿಲ್ಲ ಹಾಗೂ ಭಾ.ದಂ.ಪ್ರ ಸಂಹಿತೆ ಕಲಂ 231(1) ರಡಿಯಲ್ಲಿ ಅಭಿಯೋಜನೆಯೂ ಲಭ್ಯವಿರುವ ಎಲ್ಲ ಸಾಕ್ಷ್ಯಗಳನ್ನು ನೀಡಲು ಹಕ್ಕು ಉಳ್ಳದ್ದಾಗಿರುತ್ತದೆ ಎಂದು ಪ್ರತಿಪಾದಿಸಿದ್ದು ಹಾಗೂ ಆರೋಪಿ ಪರ ವಕೀಲರಿಗೆ ಸದರಿ ದಾಖಲೆಯ ಮೇಲೆ ಪಾಟೀಸವಾಲು ಮಾಡುವ ಅವಕಾಶ ಇರುವ ಕಾರಣ, ಆರೋಪಿಪರ ವಕೀಲರ ಆಕ್ಷೇಪಣೆಯನ್ನು ಬದಿಗೊತ್ತಿ ಸದರಿ ದಾಖಲೆಯನ್ನು ಗುರುತಿಸಲಾಯಿತು.

29. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 02.11.2015 ರ ಪಂಚನಾಮೆಯನ್ನು **ನಿಪಿ-7** ಎಂದು ಗುರುತಿಸಲಾಯಿತು. (ದಿನಾಂಕ 02.11.2015 ರ ಪಂಚನಾಮೆಯ ಮೂಲ ಪ್ರತಿಯನ್ನು ಅದೇ ದಿನ ನಡೆದ ಮತ್ತೊಂದು ಕೊಲೆ ಪ್ರಕರಣ SC 158/2016 ರಲ್ಲಿ ತನಿಖಾಧಿಕಾರಿಗಳು ಹಾಜರುಪಡಿಸಿರುವುದರಿಂದ ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನ್ಯಾಯಾಲಯವೂ **ನಿಪಿ-7(ಎ)** ಎಂದು ಗುರುತಿಸಲಾಯಿತು). ಸಾಕ್ಷಿಯ ಸಹಿಗಳನ್ನು ಮೂಲ ಪಂಚನಾಮೆಯಲ್ಲಿ ನಿಪಿ-7(ಬಿ) ರಿಂದ (ಜಿ) ರವರೆಗೆ ಗುರುತಿಸಲಾಯಿತು.

30. ನಾನು ನನ್ನ ಸಮಕ್ಷಮ ಅಮಾನತುಪಡಿಸಿಕೊಳ್ಳಲಾದ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದ ಸ್ವತ್ತುಗಳಾದ ಇಕ್ಬಾಲನ ಕೈಯಲ್ಲಿತ್ತು ಎನ್ನಲಾದ ತಲವಾರನ್ನು ಹಾಗೂ ಇರ್ಷದ್‌ನ ಕೈಯಲ್ಲಿದ್ದ ಚೂರಿಯನ್ನು ಮು.ಮಾ-11 ಮತ್ತು 12 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

31. ಸೆಲ್ ನಂಬರ್ 4 ರ ಹೊರ ಗೋಡೆಯಿಂದ ಸಂಗ್ರಹಿಸಿದ ರಕ್ತದ ಮಾದರಿ ಮತ್ತು A11 ಎಂದು ಗುರುತು ನೀಡಿ ಬಿಳಿಯ ಬಣ್ಣದ ಲೇಬಲ್‌ನ ಮೇಲೆ ನಮೂದು ಮಾಡಲಾದ ಖಾಕಿ ಬಣ್ಣದ ಕವರಿನ ಮೇಲೆ RFSL ಸೀಲ್ ಮಾಡಲಾದ ಮತ್ತು ಪಿನ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಒಂದು ಬಿಳಿಯ ಹಾಳೆಯಲ್ಲಿ ಗೋಡೆಯಿಂದ ತೆರೆದ ಪೇಂಟ್ ನ ತುಣುಕುಗಳು ಇರುವುದು ಕಂಡುಬರುತ್ತದೆ ಹಾಗೂ ಬಿಳಿಯ ಹಾಳೆಯ ಮೆಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಸದರಿ ಸ್ವತ್ತನ್ನು **ಮು.ಮಾ-13** ಎಂದು ಗುರುತಿಸಲಾಯಿತು.

32. ಸೆಲ್ ನಂಬರ್ 4 ರ ಒಳಗೆ ಸಿಮೆಂಟ್ ಬೆಡ್ ನ ಭಾಗದಿಂದ ಸಂಗ್ರಹಿಸಿದ ರಕ್ತದ ಮಾದರಿ ಮತ್ತು A12 ಎಂದು ಗುರುತು ನೀಡಿ ಬಿಳಿಯ ಬಣ್ಣದ ಲೇಬಲ್‌ನ ಮೇಲೆ ನಮೂದು ಮಾಡಲಾದ ಖಾಕಿ ಬಣ್ಣದ ಕವರಿನ ಮೇಲೆ RFSL ಸೀಲ್ ಮಾಡಲಾದ ಮತ್ತು ಪಿನ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಒಂದು ಬಿಳಿಯ ಹಾಳೆಯಲ್ಲಿ ಸಿಮೆಂಟ್ ಬೆಡ್‌ನಿಂದ ಕೆರೆದ

ಕೆಲವು ತುಣುಕುಗಳು ಇರುವುದು ಕಂಡುಬರುತ್ತದೆ ಹಾಗೂ ಬಿಳಿಯ ಹಾಳೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಸದರಿ ಸ್ವತ್ತನ್ನು **ಮು.ಮಾ-14** ಎಂದು ಗುರುತಿಸಲಾಯಿತು.

33. ಸೆಲ್ ನಂಬರ್ 4 ರ ಒಳಗೆ ದಕ್ಷಿಣ ಬದಿಯ ಗೋಡೆಯಿಂದ ಸಂಗ್ರಹಿಸಿದ ರಕ್ತ ಮತ್ತು A13 ಎಂದು ಗುರುತು ನೀಡಿ ಬಿಳಿಯ ಬಣ್ಣದ ಲೇಬಲ್‌ನ ಮೇಲೆ ನಮೂದು ಮಾಡಲಾದ ಖಾಕಿ ಬಣ್ಣದ ಕವರಿನ ಮೇಲೆ RFSL ಸೀಲ್ ಮಾಡಲಾದ ಮತ್ತು ಪಿನ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಒಂದು ಬಿಳಿಯ ಹಾಳೆಯಲ್ಲಿ ಗೋಡೆಯಿಂದ ಕೆರೆದು ತೆಗೆದ ತುಣುಕುಗಳು ಇರುವುದು ಕಂಡುಬರುತ್ತದೆ ಹಾಗೂ ಬಿಳಿಯ ಹಾಳೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಸದರಿ ಸ್ವತ್ತನ್ನು **ಮು.ಮಾ-15** ಎಂದು ಗುರುತಿಸಲಾಯಿತು.

34. ಬಿಳಿಯ ಬಟ್ಟೆಯ ಮೇಲಿನ ಲೇಬಲ್ ನ ಮೇಲೆ ಮೂರುವರೆ ಅಡಿ ಉದ್ದ 6 ಇಂಚು ಸುತ್ತಳತೆಯ ಮರದ ದೊಣ್ಣೆ ಮತ್ತು A15 ಎಂದು ಗುರುತು ನೀಡಿರುವ ಅರಗು ಸೀಲ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಬಟ್ಟೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಡಾ.ಉಲ್ಲಾಸ್ ಶೆಟ್ಟಿ ಹಾಗೂ ಡಾ.ಶೋಧನ ರಾವ್ ಪೇಜಾವರ ರವರು ಪರೀಕ್ಷೆ ಮಾಡಿದ ಬಗ್ಗೆ ಒಂದು ಚೀಟಿ

ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಒಂದು ಮರದ ದೊಣ್ಣೆಯನ್ನು **ಮು.ಮಾ-16** ಎಂದು ಗುರುತಿಸಲಾಯಿತು.

35. ಬಿಳಿಯ ಬಟ್ಟೆಯ ಮೇಲಿನ ಲೇಬಲ್‌ನ ಮೇಲೆ ಮೂರುವರೆ ಅಡಿ ಉದ್ದದ ಐದುವರೆ ಇಂಚು ಸುತ್ತಳತೆಯ ಮರದ ದೊಣ್ಣೆ ಮತ್ತು A16 ಎಂದು ಗುರುತು ನೀಡಿರುವ ಬಟ್ಟೆಯ ಮೇಲೆ ಅರಗು ಸೀಲ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಬಟ್ಟೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಡಾ.ಉಲ್ಲಾಸ್ ಶೆಟ್ಟಿ ಹಾಗೂ ಡಾ.ಶೋಧನ ರಾವ್ ಪೇಜಾವರ ರವರು ಪರೀಕ್ಷೆ ಮಾಡಿದ ಬಗ್ಗೆ ಒಂದು ಚೀಟಿ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಒಂದು ಮರದ ದೊಣ್ಣೆಯನ್ನು **ಮು.ಮಾ-17** ಎಂದು ಗುರುತಿಸಲಾಯಿತು.

36. ಬಿಳಿಯ ಬಟ್ಟೆಯ ಮೇಲಿನ ಲೇಬಲ್‌ನ ಮೇಲೆ ಮೂರು ಅಡಿ ಉದ್ದ 2 ಇಂಚು ಅಗಲದ ರೀಪು ಮತ್ತು A17 ಎಂದು ಗುರುತು ನೀಡಿರುವ ಬಟ್ಟೆಯ ಮೇಲೆ ಅರಗು ಸೀಲ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಬಟ್ಟೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಡಾ.ಉಲ್ಲಾಸ್ ಶೆಟ್ಟಿ ಹಾಗೂ ಡಾ.ಶೋಧನ ರಾವ್ ಪೇಜಾವರ ರವರು ಪರೀಕ್ಷೆ ಮಾಡಿದ ಬಗ್ಗೆ ಒಂದು ಚೀಟಿ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಒಂದು ರೀಪನ್ನು **ಮು.ಮಾ-18** ಎಂದು ಗುರುತಿಸಲಾಯಿತು.

37. ಬಿಳಿಯ ಬಟ್ಟೆಯ ಮೇಲಿನ ಲೇಬಲ್‌ನ ಮೇಲೆ 2 ಅಡಿ ಉದ್ದ 2 ಇಂಚು ಅಗಲದ ರೀಪು ಮತ್ತು A18 ಎಂದು ಗುರುತು ನೀಡಿರುವ ಬಟ್ಟೆಯ ಮೇಲೆ ಅರಗು ಸೀಲ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಬಟ್ಟೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಡಾ.ಉಲ್ಲಾಸ್ ಶೆಟ್ಟಿ ಹಾಗೂ ಡಾ.ಶೋಧನ ರಾವ್ ಪೇಜಾವರ ರವರು ಪರೀಕ್ಷೆ ಮಾಡಿದ ಬಗ್ಗೆ ಒಂದು ಚೀಟಿ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಒಂದು ರೀಪನ್ನು **ಮು.ಮಾ-19** ಎಂದು ಗುರುತಿಸಲಾಯಿತು.

38. ಸೆಲ್ ನಂಬರ್ 4 ರ ಎದುರಿನ ಮೆಟ್ಟಿಲುಗಳಿಂದ ಸಂಗ್ರಹಿಸಿದ ರಕ್ತದ ಮಾದರಿ ಮತ್ತು A19 ಎಂದು ಗುರುತು ನೀಡಿ ಬಿಳಿಯ ಬಣ್ಣದ ಲೇಬಲ್‌ನ ಮೇಲೆ ನಮೂದು ಮಾಡಲಾದ ಖಾಕಿ ಬಣ್ಣದ ಕವರಿನ ಮೇಲೆ RFSL ಸೀಲ್ ಮಾಡಲಾದ ಮತ್ತು ಪಿನ್ ಮಾಡಲಾದ ಒಂದು ವಸ್ತುವನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಒಂದು ಬಿಳಿಯ ಹಾಳೆಯಲ್ಲಿ ನೆಲದಿಂದ ಕೆರೆದು ತೆಗೆದ ಸ್ವಲ್ಪ ತುಣುಕುಗಳು ಮಾತ್ರ ಇರುವುದು ಕಂಡುಬರುತ್ತದೆ ಹಾಗೂ ಬಿಳಿಯ ಹಾಳೆಯ ಮೇಲೆ ಮಂಗಳೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ BS25/16 ಎಂದು ನಮೂದಿಸಿದ ಒಂದು ಸೀಲ್ ಇರುತ್ತದೆ. ಸದರಿ ಸ್ವತ್ತನ್ನು **ಮು.ಮಾ-20** ಎಂದು ಗುರುತಿಸಲಾಯಿತು.

39. ಬಿಳಿಯ ಬಣ್ಣದ ಲೇಬಲ್‌ನ ಮೇಲೆ ಕಪ್ಪು ಮತ್ತು ಬೂದು ಬಣ್ಣದ ಚಡ್ಡಿ ಮತ್ತು

A20 ಎಂದು ಗುರುತು ನೀಡಿ ನಮೂದು ಮಾಡಲಾದ ಹಾಗೂ ಸೀಲ್ ಮಾಡಲಾದ ಬಿಳಿಯ ಬಟ್ಟೆಯ ಕವರನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಒಂದು ಕಪ್ಪು ಮತ್ತು ಬೂದು ಬಣ್ಣದ ಚಡ್ಡಿಯನ್ನು **ಮು.ಮಾ-21** ಎಂದು ಗುರುತಿಸಲಾಯಿತು. ಸದರಿ ಚಡ್ಡಿಯಲ್ಲಿ 2 ಕಡೆ ಕತ್ತರಿಸಿ ಬಟ್ಟೆಯನ್ನು ತೆಗೆದಿರುವುದು ಕಾಣುತ್ತದೆ.

40. ಬಿಳಿಯ ಬಣ್ಣದ ಲೇಬಲ್‌ನ ಮೇಲೆ ಬಿಳಿ ಮತ್ತು ಹಳದಿ ಪಟ್ಟಿಯ ಟೀಶರ್ಟ ಮತ್ತು A21 ಎಂದು ಗುರುತು ನೀಡಿ ನಮೂದು ಮಾಡಲಾದ ಹಾಗೂ ಸೀಲ್ ಮಾಡಲಾದ ಬಿಳಿಯ ಬಟ್ಟೆಯ ಕವರನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಸದರಿ ಬಿಳಿ ಮತ್ತು ಹಳದಿ ಪಟ್ಟಿಯ ಟೀಶರ್ಟನ್ನು **ಮು.ಮಾ-22** ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಮೇಲೆ ರಕ್ತದ ಕಲೆಗಳಿದ್ದು, ಮುಂಬಾಗದಲ್ಲಿ 2 ಕಡೆ ಕತ್ತರಿಸಿ ಬಟ್ಟೆಯನ್ನು ತೆಗೆದಿರುವುದು ಕಾಣುತ್ತದೆ.

41. ಬಿಳಿಯ ಬಣ್ಣದ ಲೇಬಲ್‌ನ ಮೇಲೆ ನೀಲಿ ಬಣ್ಣದ ಟೀಶರ್ಟ ಮತ್ತು A22 ಎಂದು ಗುರುತು ನೀಡಿ ನಮೂದು ಮಾಡಲಾದ ಹಾಗೂ ಸೀಲ್ ಮಾಡಲಾದ ಬಿಳಿಯ ಬಟ್ಟೆಯ ಕವರನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಸದರಿ ನೀಲಿ ಬಣ್ಣದ ಟೀಶರ್ಟನ್ನು **ಮು.ಮಾ-23** ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಮೇಲೆ ರಕ್ತದ ಕಲೆಗಳಿದ್ದು, ಮುಂಬಾಗದಲ್ಲಿ 2 ಕಡೆ ಕತ್ತರಿಸಿ ಬಟ್ಟೆಯನ್ನು ತೆಗೆದಿರುವುದು ಕಾಣುತ್ತದೆ.

42. ಬಿಳಿಯ ಬಣ್ಣದ ಲೇಬಲ್‌ನ ಮೇಲೆ ಕೆಂಪು ಬಣ್ಣದ ಬರ್ಮುಡ ಚಡ್ಡಿ ಮತ್ತು A23

ಎಂದು ಗುರುತು ನೀಡಿ ನಮೂದು ಮಾಡಲಾದ ಹಾಗೂ ಸೀಲ್ ಮಾಡಲಾದ ಬಿಳಿಯ ಬಟ್ಟೆಯ ಕವರನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಸದರಿ ಕೆಂಪು ಬಣ್ಣದ ಬರ್ಮುಡ ಚಡ್ಡಿಯನ್ನು **ಮು.ಮಾ-24** ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಮೇಲೆ ರಕ್ತದ ಕಲೆಗಳಿದ್ದು, ಮುಂಬಾಗದಲ್ಲಿ 2 ಕಡೆ ಕತ್ತರಿಸಿ ಬಟ್ಟೆಯನ್ನು ತೆಗೆದಿರುವುದು ಕಾಣುತ್ತದೆ.

43. ಬಿಳಿಯ ಬಣ್ಣದ ಲೇಬಲ್‌ನ ಮೇಲೆ ಬೂದು ಬಣ್ಣದ ಟೀಶರ್ಟ ಮತ್ತು A24 ಎಂದು ಗುರುತು ನೀಡಿ ನಮೂದು ಮಾಡಲಾದ ಹಾಗೂ ಸೀಲ್ ಮಾಡಲಾದ ಬಿಳಿಯ ಬಟ್ಟೆಯ ಕವರನ್ನು ಆರೋಪಿಗಳು ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಸದರಿ ಬೂದು ಬಣ್ಣದ ಟೀಶರ್ಟನ್ನು **ಮು.ಮಾ-25** ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಮೇಲೆ ರಕ್ತದ ಕಲೆಗಳಿದ್ದು, ಮುಂಬಾಗದಲ್ಲಿ 2 ಕಡೆ ಕತ್ತರಿಸಿ ಬಟ್ಟೆಯನ್ನು ತೆಗೆದಿರುವುದು ಕಾಣುತ್ತದೆ. ಸಂಜೆ 06.00 ಗಂಟೆಯವರೆಗೆ ಪಂಚನಾಮೆಯನ್ನು ಪೊಲೀಸರು ಜರುಗಿಸಿರುತ್ತಾರೆ.

44. ಸಾಕ್ಷಿಯು 6 ಫೋಟೋಗಳನ್ನು ನೋಡಿ ಸದರಿ ಫೋಟೋಗಳು ಮೃತ ಗಣೇಶ ಶೆಟ್ಟಿಯ ಮೃತ ದೇಹದ ಫೋಟೋಗಳು ಎಂದು ಗುರುತಿಸಿರುತ್ತಾರೆ. ಅವುಗಳನ್ನು ಅಭಿಯೋಜನೆಯು ರುಜುವಾತು ಮಾಡುವ ಹೊಣೆಗಾರಿಕೆಯೊಂದಿಗೆ ಒಟ್ಟಾಗಿ **ನಿಪಿ-8** ಎಂದು ಗುರುತಿಸಲಾಯಿತು. ಸಾಕ್ಷಿ ಮತ್ತೆರಡು ಪೊಟೋಗಳನ್ನು ನೋಡಿ, ಅವುಗಳು ಮಂಗಳೂರು ಜಿಲ್ಲಾ ಕಾರಾಗೃಹದ ವಿಶೇಷ ಭದ್ರತಾ ವಿಭಾಗದ ಫೋಟೋಗಳು ಎಂದು ಗುರುತಿಸಿರುತ್ತಾರೆ. ಅವುಗಳನ್ನು ಅಭಿಯೋಜನೆಯು ರುಜುವಾತು ಮಾಡುವ ಹೊಣೆಗಾರಿಕೆಯೊಂದಿಗೆ ಒಟ್ಟಾಗಿ **ನಿಪಿ-9** ಎಂದು

ಗುರುತಿಸಲಾಯಿತು. ವಿಶೇಷ ಭದ್ರತಾ ವಿಭಾಗದ 4 ನೇ ಸೆಲ್ ನ 2 ಫೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಅಭಿಯೋಜನೆಯು ರುಜುವಾತು ಮಾಡುವ ಹೊಣೆಗಾರಿಕೆ ಯೊಂದಿಗೆ ಒಟ್ಟಾಗಿ **ನಿಪಿ-10** ಎಂದು ಗುರುತಿಸಲಾಯಿತು.

45. ಮಾಡೂರು ಯುಸೂಫನ ಕೊಲೆ ಮಾಡಿದ ಕಾರಣದಿಂದ ಆರೋಪಿಗಳು ಪ್ರತಿಕಾರವಾಗಿ ಗಣೇಶ ಶೆಟ್ಟಿಯನ್ನು ಕೊಲೆ ಮಾಡಿರುತ್ತಾರೆ. ನಾವು ಜೈಲಿನ ಒಳಗೆ ಖೈದಿಗಳು ಬರುವ ವೇಳೆಗೆ ಅವರನ್ನು ಪರೀಕ್ಷಿಸಿ ಒಳಗೆ ಬಿಡುತ್ತೇವೆ. ದುರುದ್ದೇಶ ಇಟ್ಟುಕೊಂಡ ಕೆಲವು ಖೈದಿಗಳು ಅನ್ಯಮಾರ್ಗದ ಮೂಲಕ ಆಯುಧಗಳನ್ನು ತರಿಸಿಕೊಂಡಿರುತ್ತಾರೆ. ರಸ್ತೆಯ ಪಕ್ಕದಲ್ಲೆ ಕಾರಾಗೃಹದ ಗೋಡೆಯಿರುವುದರಿಂದ, ಸದರಿ ಗೋಡೆಯ ಮೂಲಕ ಆಯುಧಗಳನ್ನು ತರಿಸಿಕೊಂಡಿರಬಹುದು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿದ್ದು, 2 ನೇ ಆರೋಪಿ ಗೈರು ಹಾಜರಾಗಿದ್ದು, ಅವನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.